ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ ಚನ್ನಗಿರಿ .

ಸಿಸಿ ನಂ**. 17/2021**

ಹೆಸರುಃ ಸತ್ಯ ನಾರಾಯಣ ಚಾಸಾಃ 1

ತಂದೆಃ ವೆಂಕಟರಾಜು ಪ್ರಾಸಾಃ 1

ವಯಸ್ಸುಃ 44

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಚಿರಡೋಣಿ, ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 15. 02.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ 2 ರಿಂದ 4 ರವರ ಪರಿಚಯವಿದೆ. ದಿಃ 25.05.2019 ರಂದು ನಮ್ಮ ಗೋದಾಮಿನಲ್ಲಿ ಅಡಿಕೆ ಚೀಲಗಳನ್ನು ಇಡಲಾಗ್ತಿತು ಆ ದಿನ ಸಂಜೆ 7.00 ಗಂಟೆಗೆ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದೆ. ದಿಃ 26.05.2019ರ ಬೆಳಗ್ಗೆ 7.00 ಗಂಟೆ ಗೋದಾಮು ಹೋದಾಗ ಅಲ್ಲಿ ಅರ್ದ ಶೆಟರ್ ತೆರೆದಿತ್ತು. ಅದನ್ನು ನೋಡಿ ಅನುಮಾನಗೊಂಡು ಒಳಗೆ ಹೋಗಿ ನೋಡಿದಾಗ ಅಲ್ಲಿದ್ದ 80 ಕೆಜಿ 3 ಅಡಿಕೆ ಚೀಲ ಹಾಗೂ 50 ಕೆ ಜಿ 2 ಅಡಿಕೆ ಚೀಲಗಳು ಕಳ್ಳತನವಾಗಿದ್ದವು. ದನದ ಕೊಟ್ಟಿಗೆಗೆ ಹೋಗಿ ನೋಡಿದಾಗ ಅಲ್ಲಿದ ಒಂದು ಕುರಿ ಕಳ್ಳತನವಾಗಿತ್ತು. ಅಡಿಕೆಯ ಮೌಲ್ಯ ಸುಮಾರು 1 ಲಕ್ಷಕ್ಕಿಂತ ಹೆಚ್ಚಾಗಿತ್ತು ಕುರಿ ಬೆಲೆ 10 ರಿಂದ 15 ಸಾವಿರ ರೂಗಳಾಗಿತ್ತು ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ. ದೂರನ್ನು ನಿಪಿ 1 ಸಾಕ್ಷಿ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

ದಿಃ 02.06.2019 ರಂದು ಪೊಲೀಸರು ಘಟನ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನೆ ಮಾಡಿ ಮದ್ಯಾಹ್ನ 2.00 ಗಂಟೆ ಸಮಯಕ್ಕೆ ಮಹಜರ್ ನ್ನು ಜರುಗಿಸಿರುತ್ತಾರೆ ಆ ಕಾಲಕ್ಕೆ ನನ್ನ ಜೊತೆ ಚಾಸಾ 2 ಮತ್ತು 3 ರವರು ಉಪಸ್ಥಿತರಿದ್ದರು. ಮಹಜರ್ ಗೆ ಸಹಿ ಮಾಡಿರುತ್ತೇನೆ. ಮಹಜರ್ ನ್ನು ನಿಪಿ 2 ಸಾಕ್ಷಿ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಬಾವಚಿತ್ರವನ್ನು ಪಡೆದಿರುತ್ತಾರೆ. ಸಾಕ್ಷಿ ಬಾವಚಿತ್ರದಲ್ಲಿ ತಾನಿರುವುದನ್ನು ನೋಡಿ

ಗುರುತಿಸಿರುತ್ತಾರೆ. ಸದರಿ ಬಾವಚಿತ್ರವನ್ನು ನಿಪಿ 3 ಎಂದು ಗುರುತಿಸಲಾಯಿತು. ಅಡಿಕೆ ಸಿಕ್ಕಿರುವುದಾಗಿ ಹೇಳಿದ್ದರಿಂದ ಪೊಲೀಸ್ ಠಾಣೆಗೆ ಹೋಗಿದ್ದೆ. ಅಲ್ಲಿ 80 ಕೆ ಜಿ 2 ಅಡಿಕೆ ಚೀಲ 50 ಕೆ ಜಿ 2 ಅಡಿಕೆ ಚೀಲ ಸಿಕ್ಕಿರುವುದಾಗಿ ತಿಳಿಸಿದರು ಒಟ್ಟು 5 ಚೀಲಗಳ ಪೈಕಿ 4 ಚೀಲಗಳು ಸಿಕ್ಕಿರುತ್ತವೆ. ಆರೋಪಿಗಳನ್ನು ಮಹಜರ್ ಗೆ ಕರೆದುಕೊಂಡು ಬಂದಿದ್ದರು ನಾನು ಇರಲಿಲ್ಲ ನನಗೆ ಆರೋಪಿಗಳನ್ನು ತೋರಿಸಿಲ್ಲ. ಪೊಲೀಸ್ ಠಾಣೆ ಬಳಿ ಆರೋಪಿಗಳನ್ನು ತೋರಿಸಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಬಾವಚಿತ್ರದಲ್ಲಿ ಕಂಡು ಬರುವ ಕೆಸರಿ ಬಣ್ಣದ ಅಂಗಿ ತೊಟ್ಟಿರುವ ವ್ಯಕ್ತಿಯನ್ನು ಪೊಲೀಸ್ ಠಾಣೆಯಲ್ಲಿ ನೋಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಬಾವಚಿತ್ರವನ್ನು ನಿಪಿ 4 ಎಂದು ಗುರುತಿಸಲಾಯಿತು. ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ದೂರು, ಮಹಜರ್ ಮತ್ತು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 18.08.2019 ರಂದು ಪೊಲೀಸರು ಸ್ಥಳ ಮಹಜರ್ ಗೆ ಕರೆತಂದಿದ್ದಾಗ ನಾನು ಇರಲಿಲ್ಲ. ನಂತರ ನಾನು ಪೊಲೀಸ್ ಠಾಣೆ ಹೋದಾಗ ಆರೋಪಿಗಳನ್ನು ನನಗೆ ತೋರಿಸಿರುತ್ತಾರೆ. ಅವರ ಹೆಸರು ರಮೇಶ ವಸಂತ ಎಂದು ತಿಳಿಸಿದರು ಎಂದರೆ ಸರಿ. ಆ ಕಾಲಕ್ಕೆ ನನ್ನ ಜೊತೆ ಚಾಸಾ 2 ಮತ್ತು 4 ರವರು ಪೊಲೀಸ್ ಠಾಣೆಗೆ ಬಂದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಪ್ರತಿಕೂಲವಾಗಿ ನುಡಿದ ಹೇಳಿಕೆಯ ಬಾಗವನ್ನು ನಿಪಿ 5 ಎಂದು ಗುರುತಿಸಲಾಯಿತು. ಆಗ ಆರೋಪಿಗಳು ಒಂದು ಕುರಿಯನ್ನು ಕೊಯ್ದು ತಿಂದಿರುವುದಾಗಿ ಒಂದು ಅಡಿಕೆ ಚೀಲವನ್ನು ಮಾರಾಟ ಮಾಡಿರುವುದಾಗಿ ಪೊಲೀಸರು ನಮಗೆ ತಿಳಿಸಿದರು ಎಂದರೆ ಸರಿ. ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿ ಬರೆಸಿದ್ದೆ ಎಂದರೆ ಸರಿ.

**ಪಾಟೀ ಸವಾಲು - 2ನೇ ಆರೋಪಿ ಪರ ಶ್ರೀ ಹೆಚ್ ಟಿ ವಕೀಲರಿಂದ –**

2 ದಿನ ದೂರನ್ನು ತಡವಾಗಿ ದಾಖಲಿಸಲು ಕಾರಣಗಳೇನು ಎಂಬ ಪ್ರಶ್ನೆಗೆ ಸಾಕ್ಷಿ ನಾನು 26ಕ್ಕೆ ದೂರನ್ನು ದಾಖಲಿಸಿದ್ದೇನೆ ಆದರೆ 27ಕ್ಕೆ ಪೊಲೀಸರು ನೊಂದಾಯಿಸಿಕೊಂಡಿರುತ್ತಾರೆ

ಎಂದು ನುಡಿಯುತ್ತಾರೆ. ನಮ್ಮ ಮನೆಯಲ್ಲಿ ಕಳ್ಳತನವಾಗದ ಕಾರಣ ದೂರನ್ನು 2 ದಿನ ತಡವಾಗಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಶ್ನಿತ ಕಾಲಕ್ಕೆ ಸುಮಾರು 40 ಅಡಿಕೆ ಚೀಲಗಳನ್ನು ಗೋದಾಮಿನಲ್ಲಿ ಸಂಗ್ರಹಿಸಿದ್ದೆವು. 40 ಚೀಲಗಳ ಪೈಕಿ 3 ಮತ್ತು 2 ಚೀಲಗಳು ಕಳ್ಳತನವಾಗಿವೆ ಎಂದು ದೂರನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

2. 80 ಕೆ ಜಿಯ 30 ಚೀಲಗಳಿದ್ದವು ಉಳಿದ ಚೀಲಗಳು 50 ಕೆ ಜಿ ಚೀಲಗಳಾಗಿದ್ದವು. ಈ ವಿಚಾರವನ್ನು ದೂರಿನಲ್ಲಿ ಕಾಣಿಸಿದ್ದೇನೆ. ಸಾಕ್ಷಿ ಮುಂದುವರೆದು ಕೇಳಿದ ಪ್ರಶ್ನೆಗೆ ಎಷ್ಟು ಚೀಲಗಳಿದ್ದವು ಮತ್ತು ಅವುಗಳ ಪೈಕಿ ಎಷ್ಟು ಕಳ್ಳತನವಾಗಿವೆ ಎಂದು ಕಾಣಿಸಿಲ್ಲ ಆದರೆ ಒಟ್ಟು 5 ಚೀಲ ಕಳ್ಳತನವಾಗಿದ್ದವೆಂದು ನಿಪಿ 1 ರಲ್ಲಿ ಕಾಣಿಸಿದ್ದೆವು. ಪ್ರಶ್ನಿತ ದಿನ ನಮ್ಮ ಗೋದಾಮಿನಲ್ಲಿ ಯಾವುದೆ ಅಡಿಕೆ ಚೀಲಗಳಿರಲ್ಲಿಲ್ಲ ಎಂದರೆ ಸರಿಯಲ್ಲ.

3. 80 ಕೆ ಜಿ ಹಾಗೂ 50 ಕೆ ಜಿ ಅಡಿಕೆ ಚೀಲವನ್ನು ಒಬ್ಬನೇ ವ್ಯಕ್ತಿ ಹೊರಲಾಗುವುದಿಲ್ಲವೆಂದರೆ ಸರಿ. ಪ್ರಶ್ನಿತ ಸ್ಥಳದಲ್ಲಿ ನಾವು ಚೀಲಗಳನ್ನು ತೂಕ ಮಾಡಿ ಇಟ್ಟಿರಲಿಲ್ಲ. ಸದರಿ ಗೋದಾಮಿಗೆ ಬೀಗ ಹಾಕಲಾಗಿತ್ತು. ನಾನು ನೋಡಿದಾಗ ಬೀಗ ಮುರಿದಿರಲಿಲ್ಲ ಆದರೆ ಶೆಟರ್ ಮಾತ್ರ ತೆರೆದಿತ್ತು. ನಮ್ಮ ಗೋದಾಮಿನಲ್ಲಿ ಅಡಿಕೆ ಚೀಲ ಇರಲಿಲ್ಲ ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ. ನಮ್ಮ ದನದ ಕೊಟ್ಟಿಗೆಯಲ್ಲಿ ಕುರಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಕಳ್ಳತನವಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪೊಲೀಸರು 5ನೇ ತಿಂಗಳಿನಲ್ಲಿ ಸ್ಥಳಕ್ಕೆ ಬಂದಿದ್ದರು. ಅವರು 6ನೇ ತಿಂಗಳಿನ 2 ನೇ ದಿನದಂದು ಮಹಜರ್ ಮಾಡಿರುತ್ತಾರೆ. ಆಗ ಸಮಯ ಮದ್ಯಾಹ್ನ 1.00 ಗಂಟೆಯಾಗಿತ್ತು. ಅಲ್ಲಿ ತನಿಖಾಧಿಕಾರಿಗಳು ಕಳ್ಳತನದ ವಿಚಾರಗಳನ್ನು ಬರೆದುಕೊಂಡಿರುತ್ತಾರೆ. ಅಡಿಕೆ ಗೋದಾಮಿಗೆ ಸಂಬಂದದಿಸಿ ದಾಖಲೆಯನ್ನು ತನಿಖಾಧಿಕಾರಿಗಳಿಗೆ ನೀಡಿಲ್ಲ.

4. ಮಹಜರ್ ನಲ್ಲಿ ಬರೆದ ಚೆಕ್ಕುಬಂದಿ ಹೇಳಬಲ್ಲೆ. ದಕ್ಷಿಣಕ್ಕೆ ನಮ್ಮ ತೋಟ, ಉತ್ತರಕ್ಕೆ ನಮ್ಮದೇ ಖಾಲಿ ಜಾಗ ಎಂದು ಕಾಣಿಸಲಾಗಿದೆ. ನಿಪಿ 2 ನ್ನು ಬರೆದಾಗ ನಾನಾಗಲೀ ಪಂಚ ಸಾಕ್ಷಿದಾರರು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ಕೇವಲ ಚೀಲಗಳು ಕಾಣುತ್ತವೆ ಗೋದಾಮಿನ ಸಂಪೂರ್ಣ ಚಿತ್ರಣವಿಲ್ಲ ಎಂದರೆ ಸಾಕ್ಷಿ ಅದು ಗೋದಾಮು ಎಂದು ನುಡಿಯುತ್ತಾರೆ. ದನದ ಕೊಟ್ಟಿಗೆ ಚಿತ್ರಣ ನಿಪಿ 3 ರಲ್ಲಿಲ್ಲ ಮತ್ತು ಆ ಸ್ಥಳದ ಬಾವಚಿತ್ರವನ್ನು ಪಡೆದಿಲ್ಲ.

5. ದಿಃ 18.08.2019 ರಂದು ನನ್ನನ್ನು ಪೊಲೀಸರು ಠಾಣೆಗೆ ಕರೆದಿದ್ದರು. ಅಲ್ಲಿ ತೋರಿಸಿದೆರನ್ನಲಾದ ಆರೋಪಿಗಳು ಯಾವ ಬಣ್ಣದ ಬಟ್ಟೆ ತೊಟ್ಟಿದ್ದರೆಂದು ನನಗೆ ಹೇಳಲಾಗವುದಿಲ್ಲ. ಅವರ ಹೆಸರು ವಿಳಾಸ ನನಗೆ ಗೊತ್ತಿಲ್ಲ. ನಮ್ಮ ಮನೆಯಲ್ಲಿ ಕುರಿ ಹಾಗೂ ಅಡಿಕೆ ಕಳ್ಳತನವಾಗದಿದ್ದರು ಆರೋಪಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಕರಣದ ಕುರಿತಾಗಿ ಮರು ಹೇಳಿಕೆ ನೀಡಿಲ್ಲ. ಆರೋಪಿಗೂ, ಪ್ರಕರಣಕ್ಕೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ. ಅಲ್ಲದೇ ನಾನು ಪಡೆದುಕೊಂಡ ಅಡಿಕೆ ಚೀಲಗಳಿಗೂ ಆರೊಪಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**